**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ತಿಪಟೂರು**

**ಸಿ.ಸಿ. ನಂ. 100 /2024 ಪ್ರಾ.ಸಾ – 2**
**ಚಾ.ಸಾ – 3**

**ದಿನಾಂಕ: 14-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಕೆ ಎಲ್ ಬಸವರಾಜು |
| ತಂದೆಯ ಹೆಸರು | : | ಲಿಂಗಪ್ಪ |
| ವಯಸ್ಸು | : | 76 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕಲ್ಲೇಗೌಡನ ಪಾಳ್ಯ ಗ್ರಾಮ |

**<u>ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u> :-**

ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಸಂಬಂಧಿಕರಾಗಬೇಕು.
ಚಾಸಾ- 2 ನನ್ನ ಹೆಂಡತಿ , ಚಾಸ- 1 ನನ್ನ ಮಗ , ಚಾಸ-- 4 ನನ್ನ ಪರಿಚಯಸ್ಥ , ಚಾಸ —5 ನನ್ನ ಸಂಬಂಧಿಕ .

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಯಾವುದೇ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

ಸಾಕ್ಷಿ ನ್ಯಾಯಾಲಯದ ಮುಂದಿರುವ ಮುದ್ದೆ ಮಾಲುನ್ನು ನೋಡಿ ಗುರುತಿಸಿರುವುದಿಲ್ಲ .

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ವಾಟೀ ಸವಾಲು : ಮಾನ್ಯ ಸಹಾಯಕ ಅಭಿಯೋಜಕರಿಂದ :-**

**CC. No. 100 /2024**

**PW - 2**

ದಿನಾಂಕ 07-02-2024 ರಂದು ನಾನು ಚಾಸ-- 9 ರವರ ಸಮಕ್ಷಮ '' ದಿನಾಂಕ 03-02-2024 ರಂದು ----------------------------- ನೋಡಿದರೆ ಗುರುತಿಸುತ್ತೇನೆ . '' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸ ರಿಯಲ್ಲ . ಸಾಕ್ಷಿ ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ.5 ಎಂದು ಗುರುತಿಸಲಾಯಿತು.

ದಿನಾಂಕ 03-02-2024 ರಂದು ಮಧ್ಯಾಹ್ನ 12-30 ರ ಸಮಯದಲ್ಲಿ ನಮ್ಮ ಮನೆಯ ಬಳಿ ಬಂದ 1ನೇ ಆರೋಪಿತನು ನಮ್ಮ ತೋಟಕ್ಕೆ ಹೋಗುವ ದಾರಿಯ ಅಡ್ಡಲಾಗಿ ಕಲ್ಲು ಕಂಬವನ್ನು ನೆಟ್ಟಿರುತ್ತೀರಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಹೊರಟು ಹೋದಾಗ ಕಲ್ಲು ಕಂಬವನ್ನು 2 ರಿಂದ 4ನೇ ಅರೋಪಿತರು ಕೀಳುತ್ತಿದ್ದು ಅ ಸಮಯದಲ್ಲಿ ನಾನು ಮತ್ತು ಚಾಸಾ1 ಮತು 2 ರವರು ಹೋಗಿ ಕೇಳಿದಾಗ 2 ರಿಂದ 4ನೇ ಆರೋಪಿತರು ನಮ್ಮನ್ನು ಉದ್ದೇಶಿಸಿ ಅವಾಚ್ಚ ಶಬ್ದಗಳಿಂದ ಬೈದು ಇನ್ನು ಮಂದೆ ಈ ದಾವೆಯನ್ನು ನಾವು ನೆಡೆದಾಗುವಾಗ ಅಡ್ಡಿ ಪಡಿಸಿದರೆ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲವೆಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. 2ನೇ ಆರೋಪಿ ಕಲ್ಲನ್ನು ತೆಗೆದುಕೊಂಡು ಬಂದು ನಮ್ಮ ಮನೆಯ ಕಿಟಕಿಯ ಗಾಜಿಗೆ ಹೊಡೆದು 1,000/- ನಷ್ಟ ವನ್ನುಂಟು ಮಾಡಿರುತ್ತಾರೆ ಎಂದರೆ ಸ ರಿಯಲ್ಲ.

ನಾನು ಆರೋಪಿತನೊಂದಿಗೆ ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ . ಆರೋಪಿತನು ನನಗೆ ಸಂಬಂಧಿಕರಾದ ಕಾರಣ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**

**CC. No. 100 /2024**

**PW - 2**

**CC. No. 100 /2024**

**PW - 2**